ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯನ್ನು ಮಾನ್ಯ ಪಂಪಾಪತಿ ಯವರು ಏನು ಎತ್ತಿದ್ದಾರೆ ಅದರ ಬಗ್ಗೆ ನಾನು ಹೇಳುತ್ತಿದ್ದೇನೆ ...

ಅಧ್ಯಕ್ಷರು.—ತಾವು ಒಂದು ನಿಮಿಷ ಕಂಳಿತುಕೊಂಡರೆ ನಾನು ಹೇಳುತ್ತೇನೆ. ರೂಲ್ ೭೨ರ ಕೆಳಗೆ ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ಆಯ್ಕೆ ಮಾಡಿಕೊಂಡವರು ಅವರೇ ಹೊರತು ನಾನಲ್ಲ. ಅದರ ಪ್ರಕಾರ ಅವರು ತಮ್ಮ ಸೂಚನೆಯನ್ನು ಕಳುಹಿಸಿದ್ದಾರೆ ಅದು ಯಾವರೀತಿ ನಿರ್ಣಯ ಆಗಬೇಕೆಂಬ ಬಗ್ಗೆ ನಾನು ನನಗಿರತಕ್ಕ ನಿಯಮದ ವ್ಯಾಪ್ತಿಯಲ್ಲಿ ನಾನು ಕೆಲಸ ಮಾಡಬೇಕಾಗುತ್ತದೆ. ಪ್ರತಿದಿನ ಎಲ್ಲಾ ಸೂಚನೆಗಳನ್ನೂ ಬ್ಯಾಲೇಟ್‌ಗೆ ಹಾಕುತ್ತೇವೆ, ಆದರೆ ಇದು ಬರುತ್ತಿಲ್ಲ. ಪ್ರಸ್ತಾ ಇದನ್ನು ನಾಳೆ ನಾಡಿದ್ದರಲ್ಲಿ ಬ್ಯಾಲೆಟ್‌ಗೆ ಹಾಕುತ್ತೇವೆಂದು ನಾನು ಹೇಳಿದ್ದೇನೆ. ಅದು ಬಾರದೇ ಹೋದರೆ ಆಗ ನೀವೆ ಬೇರೆ ರೂಲ್‌ನ್ನು ಆಯ್ಕೆ ಮಾಡಿಕೊಳ್ಳಿ ಎಂದು ನಾನು ಸೂಚನೆ ಕೊಟ್ಟಿದ್ದೇನೆ. ಅವರು ೩೩೪ರ ಕೆಳಗೆ ಅಥವಾ ಬೇರೆ ಯಾವುದಾದರೂ ನಿಯಮದ ಕೆಳಗೆ ಇದನ್ನು ಎತ್ತುವುದಕ್ಕೆ ಅವಕಾಶ ಇದೆ. ೭೨ನೇ ನಿಯಮವನ್ನು ಅವರೇ ಆಯ್ಕೆ ಮಾಡಿಕೊಂಡು ಅದು ಬರಲಿಲ್ಲ ಎಂದು ಕೂಗಾಡಿದರೆ ಅದಕ್ಕೆ ನಾನೇನು ಹೇಳಲಿ ?

ಶ್ರೀ ಎಂ. ಎಸ್. ಕೃಷ್ಣನ್.—ತಾವು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ರೂಲ್ ೭೨ರ ಪ್ರಕಾರ ಬ್ಯಾಲೆಟ್ ಹಾಕುತ್ತೀರಿ ಆದರಲ್ಲಿ ಯಾವರೀತಿ ಬರುತ್ತದೆ ಅದರ ಪ್ರಕಾರ ತಾವು ಮಾಡುತ್ತೀರಿ. ಅದರ ಬಗ್ಗೆ ನಾನು ಹೇಳುವುದಿಲ್ಲ. ಆದರೆ ಈ ವಿಷಯ ಬಹಳ ಗಹನವಾದುದು, ಆದ್ದರಿಂದ, ರೂಲ್ ೩೩೪ರ ಪ್ರಕಾರ ಇದಕ್ಕೆ ಅವಕಾಶವನ್ನು ಮಾಡಿಕೊಟ್ಟರೆ ಪ್ರಶ್ನೆ ಇತ್ಯರ್ಥವಾಗ ಬಹುದು. ಅಲ್ಲದೇ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳೂ ಕೂಡ ಇವತ್ತು ಇಲ್ಲಿ ಇಲ್ಲ. ಆದ್ದರಿಂದ ಇದನ್ನು ನಾಳೆ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿ.

Death of Fishermen Near Ullal

ಶ್ರೀ ವಿ. ಧನಂಜಯ ಕುಮಾರ್.—ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು.—ತಾವು ದಯವಿಟ್ಟು ಕೇಳಿ. ಮಿನಿಸ್ಟರಿಗೆ ಇಲಾಖೆಯ ಬೇ ಕೆಯ ಬಗ್ಗೆ ಇವತ್ತು ಚರ್ಚೆ ಇರುವುದರಿಂದ ಆ ಸಂದರ್ಭದಲ್ಲಿ ತಾವು ಇದನ್ನು ಪ್ರಸ್ತಾಪ ಮಾಡಿ.

ಶ್ರೀ ವಿ. ಧನಂಜಯಕುಮಾರ್.—ಸ್ವಾಮಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರು ಮತ್ತು ಉಳ್ಳಾಲಗಳ ಮಧ್ಯೆ ಇರತಕ್ಕ ಸಮುದ್ರದ ಅಳಿವೆಯಲ್ಲಿ ಸುಮಾರು ೮ ಜನ ಮಿನುಗಾರರು ಸತ್ತಿದ್ದು ೮ ದೋಣಿಗಳು ಮುಳುಗಿಹೋಗಿವೆ...

ಅಧ್ಯಕ್ಷರು.—ಇದೇ ವಿಚಾರದಲ್ಲಿ ಮಾನ್ಯ ರಾಮಚಂದ್ರರಾಯರೂ ಕೂಡ ನಿಯಮ ೭೨ರ ಕೆಳಗೆ ಸೂಚನೆಯನ್ನು ಕಳುಹಿಸಿದ್ದಾರೆ. ಅವರಿಗೂ ಇದೇರೀತಿ ಹೇಳಿದ್ದೇನೆ. ತಾವೂ ಕೂಡ ಆಗಲೇ ಪ್ರಸ್ತಾಪ ಮಾಡಿ.

ಶ್ರೀ ವಿ. ಧನಂಜಯಕುಮಾರ್.—ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಲೋಕೋಪ ಯೋಗಿ ಖಾತೆ ಸಚಿವರು ಮೊನ್ನೆ ಮಂಗಳೂರಿಗೆ ಬಂದಿದ್ದಾಗ ಅವರ ಕಣ್ಣೆದುರೇ ೧ ದೋಣಿ ಮಗುಚಿಬಿದ್ದು ಇಬ್ಬರು ನೀರಿನಲ್ಲಿ ವ ಳಲುಗಿದ್ದನ್ನು ನೋಡಿದ್ದಾರೆ, ಅಲ್ಲಿ ಹೊಯ್ಗೆ ತೆಗೆಸುತ್ತೇವೆ, ಡ್ರೆಸಿಂಗ್ ಮಾಡಿಸುತ್ತೇವೆಂದು ತಾವು ಹೇಳುತ್ತಿದ್ದೀರಿ. ಆದರೆ ಸೆಪ್ಟೆಂಬರ್ ತಿಂಗಳಲ್ಲಿ ಮಿನು ಹಿಡಿಯಲು ಅವರಿಗೆ ಒಳ್ಳೆಯ ಅನುಕೂಲಕರ ವಾತಾವರಣ ಇರುತ್ತದೆ.

ಅಧ್ಯಕ್ಷರು.—ಈ ಕಾರಣಕ್ಕಾಗಿಯೇ ಇವತ್ತೇ ಇದನ್ನು ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ವಿ. ಧನಂಜಯಕುಮಾರ್.—ಸ್ವಾಮಿ, ನಾವು ರಾತ್ರಿ ೮-೯ ಗಂಟೆಯವರೆಗೆ ಕೂತರೂ ನಮಗೆ ಮಾತನಾಡಲು ಅವಕಾಶವೇ ಸಿಕ್ಕುತ್ತಿಲ್ಲ...

ಅಧ್ಯಕ್ಷರು.—ತಾವು ತಮ್ಮ ಲೀಡರ್‌ಗೆ ಹೇಳಿ, ತಮ್ಮ ಹೆಸರನ್ನು ಕಳುಹಿಸಿಕೊಟ್ಟರೆ ಮೊದಲೇ ತಮ್ಮ ಹೆಸರನ್ನು ಕರೆಯುತ್ತೇನೆ.

ಶ್ರೀ ವಿ. ಧನಂಜಯಕುಮಾರ್.—ಹೆಸರನ್ನು ಕಳುಹಿಸಿಕೊಡುತ್ತಾರೆ. ಆದರೆ ನನ್ನ ನಸೀಬು ಒಳ್ಳೆಯದಿಲ್ಲ...

ಶ್ರೀ ವಿ. ಎಸ್. ಆಚಾರ್ಯ.—ಮಾನ್ಯ ಅಧ್ಯಕ್ಷರೆ, ೮ ಜನರು ದೋಣಿ ದುರಂತದಲ್ಲಿ ಸತ್ತಿದ್ದಾರೆ...

ಅಧ್ಯಕ್ಷರೆ.—ಇವತ್ತು ವಿಮಾನುಗಾರಿಕೆಯ ಇಲಾಖೆ ಮೇಲೆ ಚರ್ಚೆ ಇದೆ, ಆಮ ಬಂದಾಗ ತಾವು ಇದನ್ನ ಪ್ರಸ್ತಾಪ ಮಾಡಿ.

ಶ್ರೀ ವಿ. ಎಸ್. ಆಚಾರ್ಯ.—ಸ್ವಾಮಿ, ಅಲ್ಲಿ ೮ ಜನರು ಮುಳುಗಿ ಹೋಗಿದ್ದಾರೆ ಲಕ್ಷಾಂತರ ರೂಪಾಯಿಗಳ ನಷ್ಟವಾಗಿ ಹೋಗುತ್ತಿದೆ.

ಅಧ್ಯಕ್ಷರು.—ಇವತ್ತು ವಿಮಾನುಗಾರಿಕೆ ಇಲಾಖೆಯಮೇಲೆ ಮಾತನಾಡಬಹುದು ನಿಮ್ಮ ಹೆಸರೇ ಮೊದಲು ಇದೆ.

ಶ್ರೀ ವಿ. ಧನಂಜಯಕುಮಾರ್.—ಇದು ವಿಮಾನುಗಾರಿಕೆ ಇಲಾಖೆಗೆ ಸಂಬಂಧಪಟ್ಟಿದ್ದಲ್ಲ. ಲೋಕೋಪಯೋಗಿ ಇಲಾಖೆಗೆ ಸೇರಿದ್ದು ಮಾನ್ಯ ದೇವೇಗೌಡರು ಹೊನ್ನೆಯ ದಿವಸ ಮಂಗಳೂರಿಗೆ ಬಂದಿದ್ದಾಗ ಅವರ ಕಣ್ಣು ಮುಂದೆಯೇ ಒಂದು ದೋಣಿಮರಂತೆ ನಡೆದಿದೆ ಮಂಗಳೂರು ಮತ್ತು ಉಳ್ಳಾಳಗಳ ನಡುವೆ ಇರತಕ್ಕ ಸಮುದ್ರದ ಆಳವೆ ಇದ್ದು ಅದರಲ್ಲಿ ಹೊಯ್ಗೆ ತುಂಬಿಕೊಂಡು ಹಲವಾರು ವರ್ಷದಿಂದ ಮುಚ್ಚಿಹೋಗಿದೆ. ಹಿಂದೆ ಪ್ರತಿವರ್ಷವೂ ಡ್ರೆಸಿಂಗ್ ಮಾಡತಕ್ಕ ಕೆಲಸ ನಡೆಯುತ್ತಿತ್ತು ಆದರೆ ಈಗ ಇದನ್ನು ಮಾಡದೇ ಇರುವುದರಿಂದ ಹೊಸ್ಗೆ ತುಂಬಿಕೊಂಡಿದೆ. ಸಮುದ್ರಕ್ಕೆ ವಿಮಾನು ಹಿಡಿಯಲು ಹೋಗುವಂಥ ವಿಮಾನುಗಾರರು ವಾಪಸ್ಸು ಬರುವಾಗ ಕತ್ತಲಲ್ಲಿ ಆಳವ ಸರಿಯಾಗಿ ಕಾಣದೆ ಅದಕ್ಕೆ ಬಡಿದು ಆಗ ಗ್ಗೆ ಜನರು ಸಾಯ ಎತ್ತಿರುತ್ತಾರೆ. ಹೊನ್ನೆ ೮ ಜನ ಇದೇರೀತಿ ಸತ್ತಿದ್ದಾರೆ. ಲಕ್ಷಾಂತರ ರೂಪಾಯಿಗಳ ನಷ್ಟವಾಗಿದೆ. ೮ ದೋಣಿಗಳು ಸಮುದ್ರದಲ್ಲಿ ಕೊಚ್ಚಿ ಹೋಗಿವೆ. ಆ ಸಂದರ್ಭದಲ್ಲಿ ಲೋಕೋಪಯೋಗಿ ಖಾತೆ ಮಂತ್ರಿಗಳು ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಬಂದಿದ್ದರು. ಅವರು ಬಂದರನ್ನು ನೋಡುವುದಕ್ಕೆ ಹೋಗಿದ್ದಾಗ ಅವರ ಕಣ್ಣುಮುಂದೆಯೇ ಒಂದು ದೋಣಿ ಮೊಗಂಚಿ ಬಿದ್ದುದನ್ನು ಅವರೇ ನೋಡಿದ್ದಾರೆ. ಆಗ ಅಲ್ಲಿದ್ದ ವಿಮಾನುಗಾರರು ಮಂತ್ರಿಗಳಲ್ಲಿ ಮನವಿ ಮಾಡಿ ಕೊಂಡಾಗ ನಾವು ಹೊಯ್ಗೆಯನ್ನು ತೆಗೆಸುತ್ತೇವೆಂದು ಆಶ್ವಾಸನೆ ಕೊಟ್ಟು ಬಂದಿದ್ದಾರೆ. ಆದರೆ ಅವರು ಅಷ್ಟಕ್ಕೇ ತೃಪ್ತರಾಗದೇ ಹಿಂದಿನ ಸರ್ಕಾರದವರೂ ಕೂಡ ಹಲವಾರು ವರ್ಷದಿಂದ ಇದೇರೀತಿ ಆಶ್ವಾಸನೆಯನ್ನು ಕೊಡುತ್ತಾ ಬಂದಿದ್ದಾರೆ. ಆದರೆ ಇದುವರೆಗೂ ಅದನ್ನು ಮಾಡಿಸಿಲ್ಲ. ಇವತ್ತು ನಿಮ್ಮ ಕಣ್ಣಮುಂದೆಯೇ ಈ ಘಟನೆ ನಡೆದಿರುವುದರಿಂದ ತಕ್ಷಣ ಇದನ್ನು ಸರಿಪಡಿಸಲು ಕ್ರಮ ತೆಗೆದು ಕೊಳ್ಳಬೇಕೆಂದು ಕೇಳಿದರು. ಅಲ್ಲದೆ ನಾವೂ ಕೂಡ ಹೊಸ ಸರ್ಕಾರವನ್ನು ಅನೇಕಸಾರಿ ವಿನಂತಿ ಮಾಡಿ ಕೊಂಡಿದ್ದೇವೆ. ಈಗಲೂ ಕೂಡ ಡ್ರೆಸಿಂಗ್ ಕೆಲಸವನ್ನು ತಕ್ಷಣ ಪ್ರಾರಂಭಿಸಿ ಆಗುತ್ತಿರುವ ಲಕ್ಷಾಂತರ ರೂಪಾಯಿಗಳು ನಷ್ಟ ಹಾಗೂ ಜೀವ ಹಾನಿಯನ್ನು ತಪ್ಪಿಸಬೇಕೆಂದು ಮತ್ತೊಮ್ಮೆ ಒತ್ತಾಯ ಮಾಡುತ್ತೇವೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಧನಂಜಯಕುಮಾರ್ ಮತ್ತು ರಾಮಚಂದ್ರರಾಯರು ಎತ್ತಿರತಕ್ಕ ವಿಷಯ ಏನಿದೆ ಇದರಲ್ಲಿ ಸತ್ಯಾಂಶ ಇದೆ ಮಾನ್ಯ ನಾನು ಅಲ್ಲಿಗೆ ಹೋಗಿದ್ದಾಗ ಅಲ್ಲಿ ವಾಸ್ತವಾಂಶ ಏನೆಂಬುದನ್ನು ಪರಿಶೀಲಿಸಿಕೊಂಡು ಬಂದಿದ್ದೇನೆ. ವಿಮಾನುಗಾರರ ಸಂಘದ ಅಧ್ಯಕ್ಷರಾದ ಶ್ರೀ ಎಸ್. ಕೆ. ಅಮೀನ್‌ರವರೂ ಕೂಡ ಸಂಘದ ಪರವಿಯಿಂದ ಒಂದು ಮನವಿಯನ್ನು ಕೊಟ್ಟಿದ್ದಾರೆ. ಆದರೆ ಸರ್ಕಾರದ ಅಲಕ್ಷ್ಯತನದಿಂದ ಈ ರೀತಿಯಾಗಿದೆ ಎಂದು ತಿಳಿದುಕೊಳ್ಳಬಾರದು. ಅಲ್ಲಿ ನೇತ್ರಾವತಿ ಮತ್ತು ಗುರುಪುರ್ ನದಿಗಳು ಸಮುದ್ರಕ್ಕೆ ಸೇರುವ ಸಳದಲ್ಲಿ ಸಿಲ್ಟ್‌ಪ್ ಆಗಿ ಅದರ ಪರಿಣಾಮ ಒಮ್ಮೆ ಸಮುದ್ರದಿಂದ ಬರತಕ್ಕ ಅಲೆ ತುಂಬಾ ಹೆಚ್ಚು ಎತ್ತರಕ್ಕೆ ಹೋಗುತ್ತದೆ. ಅಲ್ಲಿಂದ ದೋಣಿಗಳಿಗೆ ದಾಟಿಕೊಂಡು ಬರಬೇಕಾದರೆ ತುಂಬಾ ಅಪಾಯಕ್ಕೆ ಸಿಕ್ಕುತ್ತವೆ. ನಾನು ಅಲ್ಲಿಗೆ ಹೋಗಿದ್ದಾಗ ಸುಮಾರು ೧೫೦ ಗಂಟೆ ಇರಬಹುದು. ವಿಮಾನನ್ನು ಹಿಡಿದುಕೊಂಡು ಸಮುದ್ರದಿಂದ ಬರುವಾಗ ಆಳವೆಯಿಂದ ಈಚೆಗೆ ಬರತಕ್ಕ ಸಂದರ್ಭದಲ್ಲಿ ಅಲೆಗಳು ದೊಡ್ಡದಾಗಿ ಬಂದ ಪರಿಣಾಮ ದೋಣಿಗಳು ಮೇಲೆ ಕೆಳಗೆ ಹಾರಿ ಬೀಳಬೇಕಾಗುತ್ತದೆ. ಸಾಮಾನ್ಯವಾಗಿ ಒಂದೊಂದು ದೋಣಿಯಲ್ಲಿ ೨೦-೩೦ ಜನರಿರುತ್ತಾರೆ, ಆದರೆ ಒಬ್ಬ ಹುಡುಗ ಬಂಡೆ

ದೋಣಿಯಿಂದ ಹಾರಿ ಸಮುದ್ರಕ್ಕೆ ಬಿದ್ದುದನ್ನು ಕಣ್ಣಿನಿಂದ ನಾನು ನೋಡಿದೆ. ಈ ಹೊಯ್ಗೆಯನ್ನು ತೆಗೆಸುವ ಕೆಲಸಕ್ಕಾಗಿ ಸುವಾರು ೮೦ ಲಕ್ಷ ರೂಪಾಯಿಗಳ ಅಂದಾಜಿದಲ್ಲಿ ಒಂದು ಯೋಜನೆಯನ್ನು ವಾಡಿದ್ದೇವೆ. ಕೇಂದ್ರ ಸರ್ಕಾರದವರು ಇದಕ್ಕಾಗಿ ೨೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ ಮತ್ತು ಇದಕ್ಕೆ ಎಷ್ಟು ಹಣ ವಿರ್ಚಾಗುತ್ತದೆಂದು ನಿರ್ದಿಷ್ಟವಾಗಿ ಹೇಳಿದರೆ ಅದನ್ನು ಕೊಡುತ್ತೇವೆಂದು ಕೇಂದ್ರದವರು ಹೇಳಿದ್ದಾರೆ ಅಲ್ಲಿ ಹಣದ ಕೊರತೆಗಿಂತ ಹೆಚ್ಚಾಗಿ ಕೆಲವು ತಾಂತ್ರಿಕ ಸಮಸ್ಯೆಗಳನ್ನು ನಾವು ಎದುರಿಸಬೇಕಾಗಿದೆ. ಈ ಕಾರಣದಿಂದ ಬಂದರು ಇಲಾಖೆಯ ಅಧಿಕಾರಿಗಳು, ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿ, ಕೆ.ಆರ್.ಎಸ್ ನ ನಿರ್ದೇಶಕರು, ಮೀನುಗಾರಿಕೆ ಇಲಾಖೆಯ ಅಧಿಕಾರಿಗಳ ಒಂದು ಜಂಟಿ ಸಭೆಯನ್ನು ಕರೆದು ಒಂದು ನಿರ್ಣಯವನ್ನು ಈ ಬಗ್ಗೆ ಕೊಡಬೇಕೆಂದು ನಾನು ಈಗಾಗಲೇ ಸೂಚನೆ ಕೊಟ್ಟಿದ್ದೇನೆ. ನಾನು ಆಶ್ವಾಸನೆಯನ್ನು ಅವರಿಗೆ ಕೊಟ್ಟ ಬಂದಿಲ್ಲ. ಅಲ್ಲದೆ ಆ ರೀತಿ ಸುಳ್ಳು ಆಶ್ವಾಸನೆಯನ್ನು ಕೊಡುವ ಅಭ್ಯಾಸ ಕೂಡ ನನಗಿಲ್ಲ.

ಶ್ರೀ ವಿ. ಎಸ್. ಆಚಾರ್ಯ.—ತಾವು ಹೇಳಿದ್ದರಿಂದ ಅವರ ಮನಸ್ಸಿಗೆ ಸಮಾಧಾನವಾಗಿಲ್ಲ ಈ ಹೊಯ್ಗೆ ತೆಗೆಸುವ ಕೆಲಸವನ್ನು ಮಾಡುತ್ತೇವೆಂದು ಹಿಂದಿನ ಸರ್ಕಾರದವರೂ ಹೇಳಿದ್ದರು.

ಶ್ರೀ ಹೆಚ್. ಡಿ. ದೇವೆಗೌಡ.—ಆ ಜನರು ತುಂಬಾ ಕಷ್ಟಕ್ಕೀಡಾಗಿದ್ದಾರೆಂದು ನಮ್ಮ ಅಧಿಕಾರಿಗಳು ಹೇಳಿದ್ದಾರೆ. ಅಲ್ಲದೆ ಅವರು ಮೀನು ಹಿಡಿಯಲು ಅಲ್ಲಿಗೆ ಹೋಗಲು ಅವಕಾಶವನ್ನೇ ಕೊಡಬಾರದೆಂದು ಹೇಳುತ್ತಿದ್ದಾರೆ. ಆದರೂ ಆ ಜನರು ತಮ್ಮ ಜೀವನ ನಡೆಸುವುದಕ್ಕಾಗಿ ತಮ್ಮ ಜೀವದ ಹಂಗು ತೊರೆದು ಹೋಗಿ ಮೀನುಗಳನ್ನು ಹಿಡಿಯುತಂದು ಅದನ್ನು ಮಾರಿ ಜೀವನ ನಡೆಸ ಬೇಕಾಗಿದೆ. ಆದ್ದರಿಂದ ಇಷ್ಟು ಮಾತ್ರ ನಾನು ಹೇಳುತ್ತೇನೆ. ಈ ಸಮಸ್ಯೆಗೆ ಸೂಕ್ತ ಪರಿಹಾರವನ್ನು ಕಂಡುಹಿಡಿಯುವ ವ್ಯಾಮಾಣಿಕ ಪ್ರಯತ್ನವನ್ನು ನಮ್ಮ ಸರ್ಕಾರ ಮಾಡುತ್ತದೆ ಮುಂದಿನ ತಿಂಗಳ ಮೊದಲನೆ ವಾರದಲ್ಲೇ; ಮಂಗಳೂರಿನಲ್ಲೇ ಸಭೆಯನ್ನು ಕರೆದು ಮೀನುಗಾರರ ಸಂಘದ ಅಧ್ಯಕ್ಷರನ್ನೂ ಮತ್ತು ಅವರ ಪ್ರತಿನಿಧಿಗಳನ್ನೂ ಕರೆಸಿಕೊಂಡು ಚರ್ಚೆ ಮಾಡಿ ಒಂದು ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಎಸ್. ಪಿ ಗಂಗಾಧರಪ್ಪ.—ಮಾನ್ಯ ಅಧ್ಯಕ್ಷರೇ ನಾನು ಈಗಾಗಲೇ ಒಂದು ನೋಟೀಸ್ ಕಳುಹಿಸಿಕೊಟ್ಟಿರುತ್ತೇನೆ. ತಿಪಟೂರಿನ ರಸ್ತೆ ಬಹಳ ಚಿಕ್ಕದಾಗಿ ಇರುವುದರಿಂದ ವಾಹನ ಸಂಚಾರಕ್ಕೆ ತೊಂದರೆಯಾಗಿದ್ದು ಆಕ್ಸಿಡೆಂಟ್‌ಗಳು ಆಗಾಗ್ಗೆ ಆಗುತ್ತಲೇ ಇರುತ್ತವೆ. ಒಂದು ತಿಂಗಳ ಹಿಂದೆ ಒಂದು ಆಕ್ಸಿಡೆಂಟ್ ನಡೆದಿತ್ತು. ಅದೇ ರೀತಿಯಾಗಿ ನೆನ್ನೆಯ ದಿವಸವೂ ಕೂಡ ಒಂದು. ಆಕ್ಸಿಡೆಂಟ್ ನಡೆದಿರುತ್ತದೆ. ಆದ್ದರಿಂದ ರಸ್ತೆಗಳನ್ನು ದೊಡ್ಡದು ಮಾಡುವ ಬಗ್ಗೆ ಮಾನ್ಯ ಸಚಿವರು ಉತ್ತರ ನೀಡಬೇಕು ?

ಶ್ರೀ ಎಚ್ ಡಿ. ದೇವೇಗೌಡ.—ಸ್ಥಳಕ್ಕೆ ಹೋಗಿದ್ದಾಗ ಕೇಳಿತು ಚರ್ಚೆ ಮಾಡಿದ್ದೇನೆ ಚರ್ಚೆಯ ಕಾಲದಲ್ಲಿ ಬಹುತೇಕವಾಗಿ ಹಣದ ಪ್ರಶ್ನೆ ಬಂತು. ಮೇಲಾಗಿ ಇದು ಸ್ಟೇಟ್ ಹೈವೇಯಾಗಿರುತ್ತದೆ. ಇದು ನ್ಯಾಷನಲ್ ಹೈವೇ ಅಲ್ಲ ಈ ಕಾರಣಕ್ಕಾಗಿ ರಾಜ್ಯದ ಹಣದ ಪರಿಸ್ಥಿತಿಯನ್ನು ವಿಶ್ಲೇಷಣೆ ಮಾಡಿ ನಿರ್ಧಾರ ತೆಗೆದುಕೊಳ್ಳಬೇಕಾದ ಅವಶ್ಯಕತೆ ಇದೆ. ಇದು ತಿಪಟೂರು ಮಧ್ಯದಲ್ಲಿಯೇ ಇದೆ. ಡಿವಿಯೇಷನ್ ಅಥವಾ ಬೈ ಪಾಸ್ ಮಾಡತಕ್ಕಂಥದ್ದು ಅತ್ಯಂತ ಅವಶ್ಯಕತೆ ಇದೆ. ಅದನ್ನು ನಾವು ಮನಗಂಡಿದ್ದೇವೆ. ಸಧ್ಯ ಹಣದ ತೊಂದರೆ ಇದ್ದರೂ ಈ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಎಸ್. ಬಸವರಾಜು.—ಮಾನ್ಯ ಸಭಾಧ್ಯಕ್ಷರೇ, ನಾನು ಕಳುಹಿಸಿದ ಪ್ರಶ್ನೆಗೆ ಉತ್ತರ ಬರಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ ಅವರ ಜನತಾ ಪಾರ್ಟಿಯವರೂ ಎಲ್ಲರೂ ಕೂಡ ಲೆಟರ್ ಬರೆದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಡಿಗ್ರಿ ಕಾಲೇಜನ್ನು ಮಾಡುವುದಕ್ಕೆ ನಿರ್ಣಯ ತೆಗೆದುಕೊಂಡು ಮಾಡಿಕೊಡುತ್ತೀರಾ ಎಂದು ನಾನು ಕೇಳುತ್ತೇನೆ.

ಶ್ರೀ ಬಿ ಎಸ್. ಎಡಿಯೂರಪ್ಪ.—ಸ್ಪೆಷಂಡರಿ ಗ್ರಾಜುಯೇಟ್ಸ್ ಬಗ್ಗೆ ಮಾನ್ಯ ಸಚಿವರು ಉತ್ತರ ಹೇಳಲಿಲ್ಲ.

ಅಧ್ಯಕ್ಷರು.—ಮಾನ್ಯ ಶಿಕ್ಷಣ ಸಚಿವರು ಈಗಾಗಲೇ ಉತ್ತರ ಕೊಟ್ಟಿದ್ದಾರೆ.

ಶ್ರೀ ಎಂ ವೀರಪ್ಪಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ ಸುಬೇದಾರ್ ಛತ್ರಂ, ರೋಡ್‌ನಲ್ಲಿ ಇರತಕ್ಕಂಥ ಗಂಗಾರಾಮ್ ಬಿಲ್ಡಿಂಗ್ ಕಟ್ಟಡ ಕುಸಿದು ಬಿದ್ದಮೇಲೆ ನಿನ್ನೆಯಿಂದ ಈ ದುರಂತದ ವಿಚಾರದಲ್ಲಿ ರಾಜಕೀಯ ಮಾಡಲಿಕ್ಕೆ ಹೋಗುತ್ತಾರೆ ಎನ್ನುವ ಅಭಿಪ್ರಾಯವು ಬರಬಾರದು ಎನ್ನುವ ವಿಚಾರ ಕ್ಕೋಸ್ಕರವಾಗಿ ನಾನು ಇದುವರೆಗೆ ಎತ್ತಲಿಲ್ಲ. ಆದರೆ ಇದರ ವಿಚಾರದಲ್ಲಿ ಈವತ್ತು ಕೂಡ ಸರಿಯಾದ ಮಾಹಿತಿ ಬರಲಿಲ್ಲ ಒಂದು ಸಾವಿರದಿಂದ ಜನ ಸತ್ತರು. ಳಿ ಜನ ಸತ್ತರು. ೮೦ ಜನರು ಸತ್ತರು ಎಂದು ಅನೇಕ ರೀತಿಯಲ್ಲಿ ಊಹಾಪೋಹಗಳು ಸಾರ್ವಜನಿಕರಲ್ಲಿ ಇದೆ. ಈ ಸದನದಲ್ಲಿ ಈವೊತ್ತು ಕೂಡ ಎಷ್ಟು ಜನ ಒಳಗೆ ಸಿಕ್ಕಿಹಾಕಿಕೊಂಡಿದ್ದಾರೆ. ಎಷ್ಟು ಜನ ಒಳಗಿದ್ದಂಥವರು ಗಾಯಗೊಂಡಿದ್ದಾರೆ ಎಂಬುದು ಈವೊತ್ತಿಗೂ ಗೊತ್ತಾಗದೆ ಇದು ಬಹಳ ತೀಕ್ಷ್ಣವಾಗಿ ತೊಡಕಿನ ದುರಂತವಾಗಿರತ್ತದೆ ಈ ಎಲ್ಲಾ ವಿಚಾರಗಳಿಗೆ ಈ ಸಂದರ್ಭದಲ್ಲಿ ಸರಿಯಾದಂಥ ಮಾಹಿತಿಯನ್ನು ಕೊಡಲಿಕ್ಕೆ ಸರ್ಕಾರದವರು ವಿಫಲರಾಗಿದ್ದಾರೆಂದು ನಾನು ಹೇಳಬಯಸುತ್ತೇನೆ ಇಡಿ ದುರಂತದ ಬಗ್ಗೆ ಸಾರ್ವಜನಿಕರಿಗೆ ಸನ್ಮಾನ್ಯ ಮುಖ್ಯಮಂತ್ರಿಗಳು ರೆಸ್ಕ್ಯೂ ಆಪರೇಷನ ಮಾಡುವುದಕ್ಕೆ ರಷ್ಯಾದಿಂದ ಹೆಲಿಕ್ಯಾಪ್ಟರ್‌ನ್ನು ತರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿಕೆಯನ್ನು ಕೊಟ್ಟಿರತಕ್ಕಂಥದ್ದು ಪತ್ರಿಕೆಯೆಲ್ಲಲ್ಲಾ ಬಂದಿದೆ. ಆದರೆ ನಗರ ಸಭೆಯ ಮಂತ್ರಿಗಳು ಯಾರು ಇದರ ಖರ್ಚುವೆಚ್ಚನ್ನು ನೋಡುತ್ತಾರೆಂದು ಹೇಳಿರತಕ್ಕಂಥ ಹೇಳಿಕೆಯೂ ಬಂದಿದೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಶ್ರೀ ರಾಮ್‌ದೇವ್ ಕೇಳಿದ ಪ್ರಶ್ನೆಗೆ ನಾನು ಉತ್ತರವನ್ನು ಹೇಳಿದ್ದು ಮಾನ್ಯ ಎಂ. ಎಸ್ ಕೃಷ್ಣನ್‌ರವರು ರೈಸ್ ಮಾಡಿರತಕ್ಕಂಥದ್ದು ಬೇರೆ ವಿಷಯ...

ಶ್ರೀ ಎಂ. ವೀರಪ್ಪಮೊಯಿಲಿ.—ಪತ್ರಿಕೆಗಳಲ್ಲಿ ಸ್ಪಷ್ಟವಾಗಿ ಮಾನ್ಯ ನಗರ ಸಭೆಯ ಸಚಿವರ ಹೇಳಿಕೆ ಬಂದಿರುತ್ತದೆ ಹೆಲಿಕ್ಯಾಪ್ಟರ್ ಕಾರ್ಯಚರಣೆಯ ಬಗ್ಗೆ ಪತ್ರಿಕೆಯಲ್ಲಿ ಬಂದಿರುತ್ತದೆ. ಪತ್ರಿಕೆಯಲ್ಲಿ ಬಂದಿರತಕ್ಕಂಥದ್ದು ಸರಿಯೋ ತಪ್ಪೊ. ಅದನ್ನು ನಿರಾಕರಣೆ ಮಾಡತಕ್ಕಂಥದ್ದು ಬಿಡತಕ್ಕಂಥದ್ದು ನಿಮಗೆ ಸೇರಿದ್ದ. ಈಗ ಹೆಲಿಕ್ಯಾಪ್ಟರನ್ನು ಯಾರು ವ್ಯವಸ್ಥೆ ಮಾಡುತ್ತಾರೆ ಅದಕ್ಕೆ ಸಂಬಂಧಪಟ್ಟವರು ಹೆಳಬೇಕಾದೆಂದು ಅವಶ್ಯಕತೆ ಇರುತ್ತದೆ. There are people inside the collapsed building what attempt has been made by the Government to lift them up.

ಆದ್ದರಿಂದ ಈವೊತ್ತು ಜಯನಗರ-ಜಲ್ಲಿನಲ್ಲಿ ಎಂಟು ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಡಾಬರ್ ಹಾಕುವುದಕ್ಕೆ ಬೆಂಗಳೂರು ನಗರಕ್ಕೆ ಖರ್ಚುಮಾಡುವುದಕ್ಕೆ ಹಣ ಇದೆ. ವಾಶ್‌ಔಟ್ ಆಗಿರತಕ್ಕಂಥವರ ಪ್ರಾಣ ರಕ್ಷಣೆಯನ್ನು ಮಾಡುವುದಕ್ಕೆ ಸುಮಾರು ೫೦-೬೦ ಸಾವಿರಕ್ಕೆ ಹಣವಿಲ್ಲವೆಂದು ಹೇಳತಕ್ಕಂಥದ್ದು ಸರಿಯಲ್ಲ. ಹೆಲಿಕ್ಯಾಪ್ಟರನ್ನು ತರಿಸಲಿಕ್ಕೆ ಪ್ರಯತ್ನ ಇದೆ ಎಂದು ಹೇಳತಕ್ಕಂಥ ಹೇಳಿಕೆ ಅನುಕಂಪದಿಂದ ಹೇಳಿರಬಹುದು ತರಿಸಲಿಕ್ಕೆ ಸಾಧ್ಯವಾಗದಿರಬಹುದು ಅಥವಾ ತಂದರೂ ಕೂಡ ಪ್ರಯೋಜನವಾಗದೆ ಇರಬಹುದು ಆದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಮೇಲೆ ನಗರ ಸಭಾ ಸಚಿವರು ಅವರ ಕಾಸ್ಟ್ ಯಾರು ಕೊಡುತ್ತಾರೆಂದು ಪ್ರಶ್ನೆಯನ್ನು ಹಾಕಿದ್ದು ಸಮಂಜಸವಾದುದಲ್ಲ.

ಶ್ರೀ ಎಂ. ಚಂದ್ರಶೇಖರ್.—ಪತ್ರಿಕೆಗಳಲ್ಲಿ ಊಹಾಪೋಹಗಳು ಬರುತ್ತವೆ. ಅದನ್ನೇ ಮುಖ್ಯವಾಗಿ ಇಟ್ಟುಕೊಂಡರೆ ಹೇಗೆ ?

ಶ್ರೀ ಎಂ. ವೀರಪ್ಪಮೊಯಿಲಿ.—ಅದಕ್ಕೆ ತಾವು ಉತ್ತರವನ್ನು ಕೊಡಬೇಕು ಈಗ ಇದರ ಬಗ್ಗೆ ನ್ಯಾಯಾಂಗ ವಿಚಾರಣೆಯನ್ನು ಮಾಡುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈ ಮಧ್ಯೆ ನ್ಯಾಯಾಂಗ ವಿಚಾರಣೆಯಾಗಬೇಕೆಂದು ನಾವೂ ಹೇಳಿದ್ದೇನೆ ಆದ್ದರಿಂದ ಆ ವಿಚಾರದಲ್ಲಿ ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ.

MR. SPEAKER.—You have asked for the latest figures; let us hear the Minister.

SRI M. VEERAPPA MOILY.—It is connected with that only.

MR. SPEAKER.—Your notice is about the crash of multistori d buliding on 12th September and the failure of the Government.....

SRI M VEERAPPA MOILY.—It is connected with that only. That is what I am questioning now.

ಇದಕ್ಕೆ ಸಂಬಂಧಪಟ್ಟಿದೆ. ನ್ಯಾಯಾಂಗ ವಿಚಾರಣೆಯಾಗಬೇಕು. ಇಷ್ಟೊಂದು ದುರಂತಕ್ಕೆ ಕಾರಣರಾದಂಥವರು ಯಾರು ಎಂದು ಕೂಡುಹಾಕಿರುವುದಕ್ಕೆ ನ್ಯಾಯಾಂಗ ವಿಚಾರಣೆ ಮಾಡುವುದಕ್ಕೆ ಆಜ್ಞೆ ಮಾಡಿದ್ದೀರಿ. ಈ ಮಧ್ಯೆ ಯಾರು ಈ ಕಟ್ಟಡವನ್ನು ಕಟ್ಟಲಿಕ್ಕೆ ಯಾವ ಅಧಿಕಾರಿಗಳು ಲೈಸೆನ್ಸ್‌ನ್ನು ಕೊಟ್ಟಿದ್ದರೆ ಆ ಅಧಿಕಾರಿಗಳನ್ನು ಅನಾಮತ್ತಿನಲ್ಲಿ ಇಡತಕ್ಕಂಥ ಕ್ರಮ ಆಗಬೇಕು. ಇದನ್ನು ನ್ಯಾಯಾಂಗ ವಿಚಾರಣೆ ಆಗುವವರೆಗೆ ಕಾಯುವುದಕ್ಕೆ ಆಗುವುದಿಲ್ಲ, ರೆಕಾರ್ಡ್ ಏನು ಇದೆ ಅದನ್ನು ನೋಡಿ, ಸಂಬಂಧಪಟ್ಟ ಅಧಿಕಾರಿ ಬೈಲಾಗಳನ್ನು ಮೀರಿ ಹುಕ್ಕು ಮಾಡಿದ್ದರಿಂದ ಇಂಥ ಬಿಲ್ಡಿಂಗ್‌ಗಳಿಗೆ ಬರುತ್ತಾ ಇವೆ. ಆದ್ದರಿಂದ ಇದರ ಬಗ್ಗೆ ಸರಿಯಾದ ಮಾಹಿತಿಯನ್ನು ಕೊಡಬೇಕು. ಸಾರ್ವಜನಿಕರಿಗೆ ಮಾಹಿತಿಗಳನ್ನು ತಪ್ಪಿಸುವುದಕ್ಕೆ ಕಾರಣ ಕೂಡ ಏನು ಎನ್ನುವುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ ನಾನು ಇಲ್ಲಿಯ ತನಕ ಸ್ಥಳದಲ್ಲಿಯೇ ಇದ್ದು ಈಗ ಆ ಸ್ಥಳದಿಂದ ಬರುತ್ತಿದ್ದೇನೆ. ಈಗಲೂ ಕೂಡ ಬಹುಅಂತಸ್ತಿನ ಕಟ್ಟಡ ಕುಸಿದು ಬಿದ್ದ ಸ್ಥಳದಲ್ಲಿ ಒಂದು ಶವ ಸಿಕ್ಕಿದೆ. ಇಲ್ಲಿಯ ತನಕ ೨೯ ಜನ ಸತ್ತವರ ಸಂಖ್ಯೆ ಆಗಿದೆ. ಇನ್ನೂ 6 ಮೃತ ಪಟ್ಟಿರುವ ದೇಹಗಳು ಕಾಣುತ್ತಿದೆ. ಮತ್ತೆ ೧೪೧ ಜನಕ್ಕೆ ಪೆಟ್ಟು ಆಗಿದೆ. ಗಾಯಗಳಾಗಿರತಕ್ಕಂಥ ಜನ ಚಿಕಿತ್ಸೆಯನ್ನು ಒಳರೋಗಿಗಳಾಗಿಯೂ ಮತ್ತು ಹೊರ ರೋಗಿಗಳಾಗಿಯೂ ಪಡೆಯುತ್ತಿದ್ದಾರೆ. ಸುಮಾರು ೯೭ ಜನ ತಪ್ಪಿಹೋಗಿದ್ದಾರೆಂದು ದೂರು ಬಂದಿದೆ. ಕೇಸ್ ರಿಜಿಸ್ಟರ್ ಮಾಡಿಕೊಳ್ಳಲಾಗಿದೆ. ೯೭ ಜನರು ಕಾಣದಾಗಿರುತ್ತಾರೆಂದು ಬರೆದಿರುತ್ತಾರೆ ಅವನ್ನು ಪತ್ತೆ ಹಚ್ಚಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಆರ್ಮಿ ಅಧಿಕಾರಿಗಳು ಕೊಟ್ಟ ಮಾಹಿತಿ ಪ್ರಕಾರ ಕೇವಲ ೨೦ ಜನರು ಮಾತ್ರ ಅಲ್ಲಿ ಕಾಣುತ್ತಿದ್ದಾರೆ ಅವರನ್ನೂ ಕೂಡ ಹೊರಗಡೆ ತೆಗೆಯಲು ಸರ್ವ ಪ್ರಯತ್ನಗಳು ನಡೆಯುತ್ತಿದೆ ಎಲ್ಲಾ ರೀತಿಯ ಸರ್ವ ಪ್ರಯತ್ನವನ್ನು ಮಾಡಲಾಗುತ್ತಿದೆ. ಹೆಲಿಕ್ಯಾಪ್ಟರನ್ನು ತರಿಸುವ ಬಗ್ಗೆ ಐ.ಎ.ಎಫ್. ಅವರನ್ನು ಕರೆಯಿಸಿ ವೀಕ್ಷಣೆ ಮಾಡಿಸಿ ಅವರಂ ಸುತ್ತಮುತ್ತಲೂ ಬಿಲ್ಡಿಂಗ್‌ಗಳು ಇರುವುದರಿಂದ ಲೂಸ್ ಮೆಟೀರಿಯಲ್ಸ್‌ನ್ನು ತೆಗೆಯಲು ಸಾಧ್ಯವಿಲ್ಲವೆಂದು ಅಭಿಪ್ರಾಯವನ್ನು ಕೊಟ್ಟು ಮೇರೆಗೆ ಹೆಲಿಕ್ಯಾಪ್ಟರನ್ನು ತರಿಸತಕ್ಕಂಥದ್ದನ್ನು ಕೈ ಬಿಟ್ಟಿದ್ದೇವೆ. ಬೇರೆ ಬಿಲ್ಡಿಂಗ್‌ಗಳ ಮೇಲೆ ಬಿದ್ದು ನಷ್ಟವಾಗಬಹುದು ಇದರಿಂದ ಮತ್ತಷ್ಟು ತೊಂದರೆಯಾಗಬಹುದು ಮತ್ತು ಕಪಾಲಿ ಚಿತ್ರಮಂದಿರದ ಕ್ರಾಕ್ ಗೋಡೆ ಬೀಳದಂತೆ ನೋಡಿಕೊಳ್ಳುವುದಕ್ಕೂ ಮೇಲ್ಭಾಗದಲ್ಲಿದ್ದಂಥ ಒಂದು ದೊಡ್ಡ ಟ್ಯಾಂಕ್ ಸುಮಾರು ೪೧ ಟನ್ ಭಾರ ಇರತಕ್ಕಂಥದನ್ನು ಕೊರೆದು ತೆಗೆದಂಹಾಕಿದ್ದೇವೆ. ಈಗಲೂ ಕೂಡ ಕೆಲಸ ಬಹಳ ಬರದಿಂದ ಸಾಗುತ್ತಿದೆ. ಬಿ.ಇ.ಎಂ.ಎಲ್ ರೈಲ್ವೆ ಮತ್ತು ಕೆ ಎಸ್ ಆರ್.ಟಿ.ಸಿ ಇವರು ಕೊಟ್ಟಂಥ ಏಕ ಕಾಲದಲ್ಲಿಯೇ ಕೊರೆಯುವಂತಹ ಯಂತ್ರಗಳೆಲ್ಲವೂ ಅಲ್ಲಿ ಕೆಲಸ ನಿರ್ವಹಿಸುತ್ತಿರುತ್ತವೆ. ಒಂದು ಕಡೆ ಹ್ಯಾಮರ್ ಮಾಡುತ್ತಿದ್ದರೆ, ಒಂದುಕಡೆ ಬ್ಲಾಸ್ಟರ್ ಮಾಡಿಕೊಂಡು ಹೋಗಲು ಐ.ಎ.ಎಫ್. ನವರನ್ನು ಕರೆಯಿಸಿ ಮಾಡಿಸುತ್ತಿದ್ದೇವೆ. ಈ ಸಿಮೆಂಟ್ ಮತ್ತು ಕಬ್ಬಿಣವನ್ನು ಕೊರೆಯಬೇಕೆಂದರೆ ಒಂದು ಗಂಟೆ ಇಪ್ಪತ್ತು ನಿಮಿಷ ತೆಗೆದುಕೊಳ್ಳುತ್ತದೆ. ಆದೇ ಕಾಲದಲ್ಲಿ ನಾಲ್ಕು ಬೀಮ್‌ಗಳನ್ನು ಕೊರೆಯಬಹುದೆಂದು ತಜ್ಞರು ಅಭಿಪ್ರಾಯವನ್ನು ಕೊಟ್ಟಿದ್ದಾರೆ.

ಈ ಬ್ಲಾಸ್ಟರ್‌ನ್ನು ಉಪಯೋಗ ಮಾಡಿದರೆ ಆಕ್ಕಪಕ್ಕದ ಬೇರೆ ಕಟ್ಟಡಗಳಿಗೂ ತೊಂದರೆ ಆಗುತ್ತದೆ ಈಗ ಅಲ್ಲಿನ ಕೆಲಸಕಾರ್ಯಗಳ ಬಗ್ಗೆ ಯಾರೂ ಆತಂಕಪಡಬೇಕಾಗಿಲ್ಲ. ನಾವು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದೇವೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಎಲ್ಲರೂ ಸತ್ತಮೇಲೆ ನೀವು ಏನು ಮಾಡುವುದು.

ಶ್ರೀ ಎಂ ರಘುಪತಿ.— ಈಗ ನಾವು ಮಾನವೀಯತೆ ದೃಷ್ಟಿಯಿಂದ ಪ್ರತಿಯೊಂದು ಪ್ರಾಣವನ್ನು ಉಳಿಸಲು ಸರ್ವ ಪ್ರಯತ್ನವನ್ನೂ ಮಾಡುತ್ತಿದ್ದೇವೆ. ಇದರಲ್ಲಿ ಯಾವ ರಾಜಕೀಯವೂ ಇಲ್ಲ ಅಲ್ಲಿ ಎಲ್ಲಾ ಪ್ರಯತ್ನಗಳೂ ನಡೆಯುತ್ತಿವೆಯೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಲ್ಲಿ ಸರ್ಕಾರದವರು ಪ್ರಾಮಾಣಿಕವಾದಂಥ ಕೆಲಸ ಮಾಡುತ್ತಿರುವುದಕ್ಕಾಗಿ ನಾವು ಸರ್ಕಾರಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆದರೆ ರಷ್ಯಾ ದೇಶದಿಂದ ಹೆಲಿಕ್ಯಾಪ್ಟರ್‌ನ್ನು ತರಿಸಿದರೆ ನಮ್ಮ ದೇಶಕ್ಕೇ ಅವಮಾನವಾಗುವುದಿಲ್ಲವೇ ? ಇಲ್ಲಿ ನಮ್ಮದೇ ಆದಂಥ ವ್ಯವಸ್ಥೆ ಇಲ್ಲವೇ ?

ಶ್ರೀ ಎಸ್. ಸೂರ್ಯನಾರಾಯಣ .—ಈಗ ಆ ದೇಶದಿಂದ ಎಣ್ಣೆ ಮತ್ತು ಗೋಧಿಯನ್ನು ತರಿಸತಿಲ್ಲವೇ ? ಅದೇರೀತಿ ಹೆಲಿಕ್ಯಾಪ್ಟರ್‌ನಿಂದ ಈ ಒಂದು ಕೆಲಸಕ್ಕೆ ಅನುಕೂಲವಾಗುವುದಿದ್ದರೆ ರಷ್ಯಾ ದೇಶದಿಂದ ಏತಕ್ಕೆ ತರಿಸಬಾರದು ?

ಅಧ್ಯಕ್ಷರು .—ಬೇರೆ ಎಲ್ಲಿಯೂ ಇದು ಇಲ್ಲದ ಕಾರಣದಿಂದ ಅಲ್ಲಿಂದ ಹೆಲಿಕ್ಯಾಪ್ಟರನ್ನು ತರಿಸಲು ಪ್ರಯತ್ನ ಮಾಡಲಾಗಿದೆ ಎಂದು ಈ ಮೊದಲು ಹೇಳಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಜ್ಞರ ಅಭಿಪ್ರಾಯ ಪಡೆಯುವುದಕ್ಕೆ ಮೊದಲೇ ಇಂತಹ ಹೇಳಿಕೆಗಳನ್ನು ಪತ್ರಿಕೆಗಳಿಗೆ ಕೊಡುವುದು ಸರಿಯಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ಹೆಲಿಕ್ಯಾಪ್ಟರ್ ವಿಚಾರ ಪ್ರಸ್ತಾಪ ಮಾಡಿರುವುದರಿಂದ ಈ ಬಗ್ಗೆ ಒಂದೇ ಒಂದು ಮಾತನ್ನು ಹೇಳುತ್ತೇನೆ. ಈ ವಿಚಾರದಲ್ಲಿ ಈಗಾಗಲೇ ಏರ್–ಮಾರ್ಷಲ್ ಅವರ ಜೊತೆ ಮಾತನಾಡಿದ್ದೇವೆ. ಈ ತಜ್ಞರ ಅಭಿಪ್ರಾಯ ಏನಿದೆ ಎಂದರೆ, ಈ ಬೃಹತ್ ಪ್ರಮಾಣದ ಹೆಲಿಕ್ಯಾಪ್ಟರ್‌ನ್ನು ತಂದು ಉಪಯೋಗ ಮಾಡಿದರೆ, ಅದರ ವೈಬ್ರೇಷನ್‌ನಿಂದ ಅಕ್ಕಪಕ್ಕದ ಮನೆಗಳೂ ಸಹ ಬೀಳುವ ಸ್ಥಿತಿಗೆ ಬರಬಹುದು. ಒಂದುವೇಳೆ ರಷ್ಯಾ ಅಥವಾ ಬೇರೆ ಎಲ್ಲಿಂದಲಾದರೂ ತಂದು ಉಪಯೋಗ ಮಾಡಿದರೆ ಅದು ೯೦–೪೦ ಟನ್‌ಗಳಷ್ಟು ಭಾರದ ವಸ್ತುವನ್ನು ಎತ್ತಿಕೊಂಡು ಹೋಗುವಾಗ ಅದು ಅಕಸ್ಮಾತ್ ಏನಾದರೂ ಬಿದ್ದು ಹೋದರೆ ಎಂತಹ ಅನಾಹುತವಾಗಬಹುದೆಂಬುದನ್ನು ಸಹ ನಾವು ನೋಡಬೇಕಾಗುತ್ತದೆ. ಮೊದಲೇ ಅದು ಅತ್ಯಂತ ಜನನಿಬಿಡವಾದಂಥ ಪ್ರದೇಶ. ಅದರ ಹತ್ತಿರ ವಿರುವಂತಹ ಒಂದು ವಿಶಾಲವಾದ ಪ್ರದೇಶವೆಂದರೆ ರೇಸ್‌ಕೋರ್ಸ್. ಅಲ್ಲಿಗೆ ತೆಗೆದುಕೊಂಡು ಹೋಗುವಾಗ ಏನಾದರೂ ಮಧ್ಯದಲ್ಲಿ ಡೆಬ್ರೀಸ್ ಬಿದ್ದು ಹೋದರೆ ಏನು ಮಾಡುವುದು. ಮಧ್ಯದಲ್ಲಿ ಏನೂ ಕಾಡಿಲ್ಲ, ಸಮುದ್ರವಿಲ್ಲ, ಆದ್ದರಿಂದ ಇದನ್ನು ಉಪಯೋಗ ಮಾಡುವುದು ಅಷ್ಟು ಸೂಕ್ತವಲ್ಲವೆಂದು ಏರ್–ಫೋರ್ಸ್‌ನ ಅಧಿಕಾರಿಗಳು ಅಡ್ವೈಜ್ ಮಾಡಿದ್ದಾರೆ, ಈ ಕಾರಣದಿಂದ ಇದರ ಉಪಯೋಗವನ್ನು ಕೈಬಿಡಲಾಗಿದೆ. ಈ ಕಟ್ಟಡ ಕಟ್ಟಲು ಯಾರು ಲೈಸನ್ಸ್ ಕೊಟ್ಟಿದ್ದಾರೆ, ಅವರನ್ನು ಏತಕ್ಕೆ ಅಮಾನತ್ತಿನಲ್ಲಿಡಬಾರದೆಂದು ಕೇಳಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಲೈಸನ್ಸ್ ಕೊಟ್ಟಮೇಲೆ ಅವರು ಬೈಲಾವನ್ನು ಅತಿಕ್ರಮಣ ಮಾಡಿ ಏನಾದರೂ ಕಟ್ಟಡ ಕಟ್ಟಿದ್ದಾರೆಯೇ ಎಂಬುದನ್ನು ತನಿಖೆ ಮಾಡಿ ನೋಡಬೇಕೆಂದು ನಾನು ಹೇಳಿದ್ದು.

ಶ್ರೀ ರಾಮಕೃಷ್ಣ ಹೆಗಡೆ.—ಇದಕ್ಕೆ ಲೈಸನ್ಸ್ ಕೊಟ್ಟವರು ಯಾರು ಮತ್ತು ಲೈಸನ್ಸ್ ಕೊಟ್ಟಿದ್ದು ತಪ್ಪು ಎಂದು ತಾವು ಕೇಳಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅದರ ಬಗ್ಗೆಯೂ ತನಿಖೆಯಾಗಲಿ.

ಶ್ರೀ ರಾಮಕೃಷ್ಣ ಹೆಗಡೆ .—೧೯೮೨ನೇ ಇಸವಿಯಲ್ಲಿ ಇದೇ ಗಂಗಾರಾಮ್ ಕಟ್ಟಡದ ಎರಡನೇ ಮಹಡಿಯಲ್ಲಿರುವ ಬುಕ್ ಷಾಪ್‌ನ ಉದ್ಘಾಟನೆ ಆಗಿದೆ. ಇದರ ಒಂದು ಚಿತ್ರ ಪತ್ರಿಕೆಗಳಲ್ಲಿ ಬಂದಿದೆ. ಅದು ಇಲ್ಲಿದೆ, ತಾವು ಬೇಕಾದರೆ ನೋಡಬಹುದು. ಇದರ ಉದ್ಘಾಟನೆಯಾದ ಮೇಲೆ ಇದಕ್ಕೆ ಲೈಸನ್ಸ್ ಕೊಟ್ಟಿದ್ದು. ಅದಕ್ಕಾಗಿಯೇ ಇವೊತ್ತು ಬೈಲಾವನ್ನು ಉಲ್ಲಂಘನೆ ಮಾಡಿದವರ ಮೇಲೆ ಕ್ರಮ ಕೈಗೊಳ್ಳಬೇಕೋ ಅಥವಾ ಲೈಸನ್ಸ್ ಕೊಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕೋ ಎಂಬುದನ್ನು ತೀರ್ಮಾನ ಮಾಡಲು ನ್ಯಾಯಾಂಗ ತನಿಖೆಗೆ ನಾವು ವ್ಯವಸ್ಥೆ ಮಾಡಿದ್ದೇವೆ. ಮತ್ತೊಂದು ಮಾತನ್ನು ಇಲ್ಲಿ ನಾನು ಹೇಳುತ್ತೇನೆ ಈಗ ಹಿಜನರ ಒಂದುತಜ್ಞರ ಸಮಿತಿಯನ್ನು ಮಾಡಿದ್ದೇವೆ ಬೇರೆಕಟ್ಟಡಗಳ ಕೆಲ್ಲಸ ನಿಲ್ಲಿಸಿರುವುದರಿಂದ ಸಾವಿರಾರು ಜನರಿಗೆ ಕೆಲಸವಿಲ್ಲದಂತೆ ಆಗಿದೆ ಎಂದು ಶ್ರೀ ಕೃಷ್ಣನ್ ಅವರು ಮತ್ತು ಶ್ರೀ ಸೂರ್ಯನಾರಾಯಣರಾವ್ ಅವರು ಹೇಳಿದ್ದಾರೆ. ಈ ಕಾರಣದಿಂದಲೇ ಈ ಹಿ ಜನರ ತಜ್ಞರ ಸಮಿತಿ ತಕ್ಷಣವೇ ಕೆಲಸ ಪ್ರಾರಂಭ ಮಾಡುತ್ತದೆ. ಈ ಒಂದು ಅನಾಹುತವನ್ನು ಕಣ್ಣಲ್ಲಿ ನೋಡಿದ ಮೇಲೆ ಬೇರೆ ಕಟ್ಟಡ

ಗಳನ್ನು ಪರೀಕ್ಷೆ ಮಾಡದೆ ಕಟ್ಟಲು ಬಿಟ್ಟರೆ ನಾಳೆ ಬೇರೆ ಕಡೆಯೂ ಇಂತಹ ಅನಾಹುತಗಳಾದರೆ ಸರ್ಕಾರಕ್ಕೆ ಅದರಿಂದ ಕೆಟ್ಟ ಹೆಸರು ಬರುವುದು ಹೋಗಲಿ, ಅದರಿಂದ ಎಷ್ಟು ಜನರಿಗೆ ಪ್ರಾಣ ಹಾನಿ ಯಾಗಬಹುದು ? ಆದ್ದರಿಂದ ಇದರಲ್ಲಿ ರಾಜಕೀಯದ ಪ್ರಶ್ನೆ ಏನೂ ಇಲ್ಲ. ಈಗ ಈ ಕಟ್ಟಡದೊಳಗಡೆ ಎಷ್ಟು ಜನರಿದ್ದಾರೆಂಬುದನ್ನು ಖಚಿತವಾಗಿ ಹೇಳಂವದಕ್ಕಾಗುವುದಿಲ್ಲ. ಏಕೆಂದರೆ, ಇದನ್ನು ನೋಡಿ ದವರು ಯಾರೂ ಇಲ್ಲ ಕಾಣೆಯಾದವರ ಬಗ್ಗೆ ಕೆಲವರು ಈಗ ಉಪ್ಪಾರಪೇಟೆ ಪೋಲೀಸ್ ಸ್ಟೇಷನ್‌ನಲ್ಲಿ ಅವರ ಹೆಸರುಗಳನ್ನು ರಿಜಿಸ್ಟರ್ ಮಾಡಿಸಿದ್ದಾರೆ. ಇದರ ಆಧಾರದ ಮೇಲೆ ನಾವು ಹೇಳಬಹುದೇ ಹೊರತು ಖಚಿತವಾಗಿ ನೋಡಿದವರು ಯಾರೂ ಇಲ್ಲ. ಅಲ್ಲಿ ಕೆಲಸ ನಿರ್ವಾನವಾಗಿ ನಡೆಯುತ್ತಿದೆ ಎಂಬ ಟೀಕೆ ಜನರಿಂದ ಬಂದಿದೆ ಎಂಬುದು ನನಗೆ ಗೊತ್ತು. ಆದರೆ ಅಲ್ಲಿರುವಂತಹ ಒಂದು ಕ್ಲಿಷ್ಟತೆಯನ್ನು ಗಮನಿಸಿದಾಗ ಈಗ ಆಗಿರುವಂತಹ ಕೆಲಸ ಅಸಮಾಧಾನಕರವಾಗಿಲ್ಲ.

FINANCIAL BUSINESS

Discussion and voting on Demands for Grants 1983-84

ಅಭಿಯಾಚನೆ ಕ್ರಮಾಂಕ ೨೩—ವಾಹನ ತೆರಿಗೆ.

೧. ಶ್ರೀರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೪ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾಹನ ತೆರಿಗೆಗಳಿಗೆ ಸಂದಾಯ ಮಾಡುವಲ್ಲಿ ಬರಕತ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨,೭೫,೯೦,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

೨. ಅಭಿಯಾಚನೆ ಕ್ರಮಾಂಕ ೨೪-ಪೋಲೀಸ್ ಮತ್ತು ಅಗ್ನಿಶಾಮಕ ಸೇವೆ.—

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೪ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪೋಲೀಸ್ ಮತ್ತು ಅಗ್ನಿಶಾಮಕ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೯,೬೫,೫೫ ೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

೩. ಅಭಿಯಾಚನೆ ಕ್ರಮಾಂಕ ೨೫—ಜೈಲುಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೪ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜೈಲುಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨,೮೩,೮೧,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

೪. ಅಭಿಯಾಚನೆ ಕ್ರಮಾಂಕ ೧೪—ವರಮಾನ ತೆರಿಗೆ, ವೃತ್ತಿಗಳು ಮೂರಾಟ ಮತ್ತು ಇತರ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೪ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವರಮಾನತೆರಿಗೆ ವೃತ್ತಿಗಳು ಮೂರಾಟ ಮತ್ತು ಇತರೆ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೭,೭೧,೮೪,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಕೊಳ್ಳುತ್ತೇನೆ.

೫. ಅಭಿಯಾಚನೆ ಕ್ರಮಾಂಕ-೧೫ ಖಜಾನೆ ಮತ್ತು ಲೇಖಾ ಇಲಾಖೆಗಳ ಆಡಳಿತ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೪ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಖಜಾನೆ ಮತ್ತು ಲೇಖಾ ಇಲಾಖೆಗಳ ಆಡಳಿತಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚ